



ಲಾಕ್‌ಡೌನ್ ಸಮಯದಲ್ಲಿ ಪರಿಸರ ಮಾಲಿನ್ಯದ ಪ್ರಮಾಣ ಇದ್ದಕ್ಕಿದ್ದಂತೆ ಕಡಿಮೆಯಾದುದರ ಫಲವಾಗಿ ನೂರಾರು ಮೈಲಿ ದೂರದ ಗುಡ್ಡಗಳು ಕಾಣಿಸುವ ಮಟ್ಟಿಗೆ ಪರಿಸರ ತಿಳಿಯಾದುದರ ಬಗ್ಗೆ ವರದಿಗಳಾಗಿದ್ದವು. ವಾಹನ ಸಂಚಾರ ವಿರಳವಾದ ಸಂದರ್ಭದಲ್ಲಿ ನವಿಲುಗಳು ರಸ್ತೆಗಳಲ್ಲಿ ಕಾಣಿಸಿಕೊಂಡಿದ್ದವು. ಮಹಾನಗರಗಳಲ್ಲಿನ ವಾಯುಮಾಲಿನ್ಯದ ದುಸ್ಥಿತಿಯಲ್ಲೂ ಸುಧಾರಣೆ ಆಗಿತ್ತು. ಆದರೆ, ಕೊರೊನಾ ನಂತರ ಮತ್ತದೇ ಸ್ಥಿತಿ. ಈ ವಿದ್ಯಮಾನದಲ್ಲಿ ನಮಗೊಂದು ಪಾಠವಿದೆ. ಮನುಷ್ಯನ ಹಸ್ತಕ್ಷೇಪ ಕಡಿಮೆಯಾದರೆ, ಪರಿಸರದ ಆರೋಗ್ಯ ತಂತಾನೇ ಸುಧಾರಿಸುತ್ತದೆ ಎನ್ನುವ ಪಾಠವದು. ಆ ಪಾಠವನ್ನು ನಾವು ಕಲಿಯದೆ ಹೋದಲ್ಲಿ, ವಿನಾಶವನ್ನು ಬಯಸಿ ಬಯಸಿ ಹತ್ತಿರವಾಗಿಸಿಕೊಳ್ಳುತ್ತಿದ್ದೇವೆ ಎಂದೇ ಅರ್ಥ.

ಅರಿವಿನ ಬಳ್ಳಿಗೆ ಎಡತಾಕಲು ಮಳೆಯ ದಿನಗಳು ಅತ್ಯುತ್ತಮ ಸಮಯ. ಕಳೆದ ಕೆಲವು ವರ್ಷಗಳಿಂದ ಮಳೆಚಕ್ರದಲ್ಲಿ ಗಣನೀಯ ಬದಲಾವಣೆಯಾಗಿದೆ. ರೈತನ ಕೃಷಿ ಲೆಕ್ಕಾಚಾರಕ್ಕೆ ಅನುಗುಣವಾಗಿ ಮಳೆ ಸುರಿಯುತ್ತಿಲ್ಲ. ಕೃಷಿಗೆ ಪೂರಕವಾಗದೆ ಹೋದರೂ, ಮಳೆಯ ಪ್ರಮಾಣದಲ್ಲಿ ಸಾಕಷ್ಟು ಏರಿಕೆಯಾಗಿದೆ. ಮಳೆ ಹೆಚ್ಚಾದಷ್ಟೂ ಅನಾಹುತಗಳೂ ಹೆಚ್ಚು. ಹೀಗೆ, ಮಳೆಯ ಚಿತ್ತ ಚಂಚಲಗೊಂಡಿರುವ ಸಂದರ್ಭದಲ್ಲಿ ನಾವು ಚಿತ್ತಚಾಂಚಲ್ಯಕ್ಕೆ ಒಳಗಾಗದೆ ಯೋಚಿಸಬೇಕಾಗಿದೆ. ಮಳೆನೀರನ್ನು ಸಂಗ್ರಹಿಸಿ, ಬಳಸಿಕೊಳ್ಳುವ ದಾರಿಗಳನ್ನು ಹುಡುಕಿಕೊಳ್ಳಬೇಕಾಗಿದೆ.

ಮಳೆಗಾಲದಲ್ಲಿ ಪ್ರತಿಯೊಬ್ಬರೂ ಮಾಡಬಹುದಾದ ಹಾಗೂ ಮಾಡಲೇಬೇಕಾದ ಕೆಲಸ ಮಳೆನೀರಿನ ಸಂಗ್ರಹ. ಆಧುನಿಕ ಜಗತ್ತನ್ನು ಬಾಧಿಸುತ್ತಿರುವ ಸಂಗತಿಗಳಲ್ಲಿ ನೀರಿನ ಕೊರತೆಯೂ ಒಂದಾಗಿದೆ. ಬೇಕಾಬಿಟ್ಟಿ ಬಳಕೆಯಿಂದಾಗಿ ಅಂತರ್ಜಲದ ಮಟ್ಟ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಸಾವಿರಾರು ಅಡಿಗಳ ಆಳದಿಂದ ಮೇಲೆತ್ತುವ ನೀರು ಕುಡಿಯಲು ಯೋಗ್ಯವಾಗಿಲ್ಲ. ಈ ಜಲಬಿಕ್ಕಟ್ಟಿಗೆ ಮಳೆ ಕೊಯಿಲೇ ಉತ್ತರವಾಗಿದೆ. ಮನೆಯ ತಾರಸಿ ಮತ್ತು ಅಂಗಳದಲ್ಲಿ ಬೀಳುವ ನೀರನ್ನು ಬಿದ್ದಲ್ಲೇ ತಣಿಸುವುದು ಸಾಧ್ಯವಾದರೆ, ಅಂತರ್ಜಲದ ಮಟ್ಟ ಮತ್ತು ಗುಣಮಟ್ಟ ಸುಧಾರಣೆಗೊಳ್ಳಲಿದೆ. ಮಳೆನೀರಿನ ಸಂಗ್ರಹದಿಂದಾಗಿ ಕೃತಕ ಪ್ರವಾಹಗಳ ಸಾಧ್ಯತೆಗೂ ತಡೆಯೊಡ್ಡಬಹುದು.

ತಾಪಮಾನ ನಿಯಂತ್ರಣ ಈಗ ಸ್ಥಳೀಯ ಸಮಸ್ಯೆಯಾಗಿ ಉಳಿದಿಲ್ಲ. ಪರಿಸರ ಸಂರಕ್ಷಣೆಯನ್ನು ಸರ್ಕಾರಗಳ ಜವಾಬ್ದಾರಿಯ ರೂಪದಲ್ಲಷ್ಟೇ ನೋಡುವುದೂ ಸಾಧ್ಯವಿಲ್ಲ. ಪರಿಸರ ಸಂರಕ್ಷಣೆಯ ಕಾಳಜಿಯನ್ನು ವೈಯಕ್ತಿಕ ಮಟ್ಟದಲ್ಲಾದರೂ ಗಂಭೀರವಾಗಿ ಕಾರ್ಯರೂಪಕ್ಕೆ ತರುವುದು ಇಂದಿನ ತುರ್ತು. ವೈಯಕ್ತಿಕ ನೆಲೆಗಟ್ಟಿನಲ್ಲಿ ಪರಿಸರ ಕಾಳಜಿ ಕಾರ್ಯರೂಪಕ್ಕೆ ಬಂದರೆ, ಅದು ಆಡಳಿತದ ಭಾಗವಾಗಲಿಕ್ಕೆ ಹೆಚ್ಚಿನ ಸಮಯ ಬೇಕಿಲ್ಲ. ಶೀತಲಯಂತ್ರಗಳಿಂದ ಹೊರಬಂದು, ಪರಿಸರದ ಕ್ಷೋಭೆಗೆ ಉತ್ತರ ಹುಡುಕಲಿಕ್ಕೆ ಮಳೆಗಾಲ ಬಹು ಪ್ರಶಸ್ತ ಸಮಯ. ಮಳೆಗಾಲ ನೀರು ಉಳಿಸುವ, ನೀರನ್ನು ಭೂಮಿಗೆ ಮರಳಿಸುವ ಸಮಯ; ಹಸಿರನ್ನು ಹೆಚ್ಚಿಸುವ ಸಮಯ.

ಇಂದಿನ ಪರಿಸ್ಥಿತಿ ನೋಡಿ. ಮಳೆಗಾಲದಲ್ಲಿ ನದಿಗಳು ಉಕ್ಕಿಹರಿಯುತ್ತವೆ. ಪ್ರವಾಹದ ಸ್ಥಿತಿ ತಲೆದೋರುತ್ತದೆ. ಬೇಸಿಗೆಯಲ್ಲಿ ಯಥಾಪ್ರಕಾರ ನದಿಗಳು ಒಣಗಿ, ನೀರಿಗೆ ಹಾಹಾಕಾರ. ಹಾಗಾದರೆ, ಸುರಿದ ಮಳೆನೀರೆಲ್ಲ ಎಲ್ಲಿಹೋಯಿತು? ಮಳೆ ನೀರು ಭೂಮಿಯಲ್ಲಿ ಸರಿಯಾಗಿ ಇಂಗದೆ ಹರಿದುಹೋಗುತ್ತಿರುವುದರ ಪರಿಣಾಮವನ್ನು ನಾವು ಅನುಭವಿಸುತ್ತಿದ್ದೇವೆ. ಈ ನೀರನ್ನು ಉಳಿಸಿಕೊಳ್ಳುವ ಬಗ್ಗೆ ಸಾಮುದಾಯಿಕ ಪ್ರಯತ್ನಗಳು ನಡೆಯಬೇಕಾದುದು ಸದ್ಯದ ತುರ್ತು.

ಭೂಮಿಯ ಮೇಲೆ ಹಸುರು ಹೆಜ್ಜೆಗಳನ್ನು ಮೂಡಿಸುವ ಬದಲು, ಇಂಗಾಲದ ಹೆಜ್ಜೆಗುರುತುಗಳನ್ನು ಉಳಿಸುತ್ತಿರುವುದೇ ಪರಿಸರದಲ್ಲಿನ ವ್ಯತ್ಯಾಸಕ್ಕೆ ಪ್ರಮುಖ ಕಾರಣವಾಗಿದೆ. ನಾವೆಲ್ಲರೂ ಇಂಗಾಲದ ರಾಯಭಾರಿಗಳಂತೆ ವರ್ತಿಸುವ ಮೂಲಕ ಪರಿಸರದ ಸಮತೋಲನ ತಪ್ಪಲು ಕಾರಣವಾಗಿದ್ದೇವೆ. ವಾತಾವರಣ ಹದಗೆಟ್ಟಿರುವುದರ ಬಿಸಿ ನಮಗೆ ತಾಗಿದ್ದರೂ, ನಮ್ಮ ಮಿತಿಯಲ್ಲಿಯೇ ಅದಕ್ಕೆ ಪರಿಹಾರೋಪಾಯಗಳನ್ನು ಹುಡುಕುವ ಗೋಜಿಗೆ ಹೋಗುತ್ತಿಲ್ಲ. ಮನೆಯ ಅಕ್ಕಪಕ್ಕ ಮರ ನೆಡುವುದು, ಮಳೆ ನೀರನ್ನು ಮಣ್ಣಿಗೆ ಮರಳಿಸುವುದು — ಎಲ್ಲರೂ ಮಾಡಬಹುದಾದ ಇಂಥ ಸಣ್ಣಪುಟ್ಟ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲೂ ನಾವು ಸೋಲುತ್ತಿದ್ದೇವೆ. ಮಕ್ಕಳಿಗೆ ಆಸ್ತಿ ಮಾಡಿಡುವುದಕ್ಕೆ ಪೋಷಕರು ವಹಿಸುವ ಆಸ್ಥೆಯ ಒಂದಂಶವಾದರೂ ಪರಿಸರದ ನಾಳೆಗಳಿಗಾಗಿ ಸಂದಿರುವ ಉದಾಹರಣೆಗಳು ತೀರಾ ವಿರಳ. ಸ್ವಚ್ಛ ಹಾಗೂ ಸಮೃದ್ಧ ಪರಿಸರ ನಮ್ಮ ಮಕ್ಕಳಿಗೆ, ಮುಂದಿನ ತಲೆಮಾರುಗಳಿಗೆ ನಾವು ಉಳಿಸಿಹೋಗಬಹುದಾದ ಬಹು ದೊಡ್ಡ ಆಸ್ತಿ ಅನ್ನಿಸದಿರುವುದು ವರ್ತಮಾನದ ಬಹುದೊಡ್ಡ ಚೋದ್ಯ.

'ಮತ್ತೆ ಮಳೆ ಹುಯ್ಯುತ್ತಿದೆ... ಎಲ್ಲ ನೆನಪಾಗುತಿದೆ...'

ಈ ಮಳೆ ನಮ್ಮೊಳಗನ್ನು ಒದ್ದೆಯಾಗಿಸಲಿ. ಪರಿಸರ ಕಾಳಜಿಯ ಬೀಜಗಳನ್ನು ನಮ್ಮೆದೆಯಲ್ಲಿ ಚಿಗುರಿಸಲಿ.

ಪ್ರತಿಕ್ರಿಯಿಸಿ: **feedback@sudha.co.in**